ಶ್ರೀ ಬಾಲಚಂದ್ರ ಜಾರಕಿಹೊಳಿ

ಅ) ಅಲೆಮಾರಿ ಜನಾಂಗವು ಪ್ರಸ್ತುತ ಪ್ರಬರ್ಗ–1 ರಲ್ಲಿ ಸೇರಿದ್ದು ಪ್ರವರ್ಗ –1 ರಲ್ಲಿರುವ ಜನಾಂಗದವರಿಗೆ ಶೇಕಡಾ 4 ರಷ್ಟು ಮಿಸಲಾತಿಯನ್ನು ಕಲ್ಪಿಸಲಾಗಿದೆ ಅಲೆಮಾರಿ ಜನಾಂಗದವರನ್ನು ಪ್ರವರ್ಗ–1 ರಿಂದ ಬೇರ್ಪಡಿಸುವ ಕುರಿತು ಹಿಂದುಳಿದ ವರ್ಗಗಳ ಶಾಶ್ವತ ಆಯೋಗವು ವರದಿ ನೀಡಿದ ನಂತರ ಪರಿಶೀಲಿಸಲಾಗುವುದು

ಆ) ವರದಿ ಜಾರಿಗೊಳಿಸುವ ವಿಷಯ ಪರಿಶೀಲನೆಯಲ್ಲಿದೆ

ಇ) ಉದ್ಭವಿಸುವುದಿಲ್ಲ

167(239) ಶ್ರೀ ಬಾಲಾಜಿ ಆರ್ ಮೆಂಡನ್

ವಿಷಯ ಜಾತಿವಾರು

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಒಟ್ಟು ಜಾತಿಗಳೆಷ್ಟು? (ವಿವರ ನೀಡುವುದು)

ಆ) ಮೀನುಗಾರಿಕೆ ನಡೆಸುವ ಜಾತಿಗಳಾವುವು?

ಇ) ಮೊಗವೀರ ಜಾತಿಗೆ ಸೇರಿರುವ ಉಪ ಜಾತಿಗಳಾವುವು

ಈ) ರಾಜ್ಯದಲ್ಲಿ ಮೊಗವೀರ ಉಪಜಾತಿಗೆ ಸೇರಿರುವ ಜನ ಸಂಖ್ಯೆ ವಾರು ಉಪ ಜಾತಿವಾರು ಮಾಹಿತಿ ನೀಡುವುದು

ಶ್ರೀ ಬಾಲಚಂದ್ರ ಜಾರಕಿಹೊಳಿ

ಅ) 1 ಪರಿಶಿಷ್ಟಜಾತಿ 101 ಜಾತಿಗಳು

2 ಪರಿಶಿಷ್ಟ ವರ್ಗ 50 ಜಾತಿಗಳು

3 ಹಿಂದುಳಿದ ವರ್ಗ207 ಪ್ರಮುಖ ಜಾತಿಗಳು

616 ಉಪಜಾತಿಗಳು/ಪರ್ಯಾಯ ಪದಗಳು

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ಜಾತಿಗಳು ಸೇರಿ ರಾಜ್ಯದಲ್ಲಿ ಒಟ್ಟು 974 ಜಾತಿಗಳು ಇರುತ್ತವೆ

ಆ) ನಿರ್ದಿಷ್ಟವಾಗಿಮೀನುಗಾರಿಕೆ ನಡೆಸುವ ಜಾತಿಗಳ ಪಟ್ಟಿ ಲಭ್ಯವಿರುವುದಿಲ್ಲ ಆದಾಗ್ಯೂ ಸರ್ಕಾರಿ ಆದೇಶ ಸಂಖ್ಯೆ ಸಕಇ 225 ಬಿಸಿಎ 2000, ದಿನಾಂಕ 30 03 2002 ರ ಪ್ರವರ್ಗ –1 ರ ಕ್ರಮ ಸಂಖ್ಯೆ 6 ರಡಿಯಲ್ಲಿ ಬರುವ ಈ ಕೆಳಕಂಡ ಜಾತಿಗಳ ಸಾಂಪ್ರದಾಯಿಕ ಕಸುಬು ಸಾಮಾನ್ಯವಾಗಿ ಮೀನುಗಾರಿಕೆಗೆ ಸಂಭಂದಿಸಿದ್ದಾಗಿರುತ್ತದೆ

1 ಬೆಸ್ತ	2 ಅಂಬಿಗ/ಅಂಬಿ
3 ಬಾರ್ಕಿ/ಬಾರಿಕ	4 ಬೆಸ್ತರ್
5 ಭೋಯಿ	6 ರಾಜಬೋಯಿ
7 ಬುಂಡೆ ಬೆಸ್ತರ್	8 ದಾಲ್ಚಿ
9 ದಾವತ್	10 ಗಬಿಟ್
11 ಗಲಾಡಕೊಂಕಣಿ	12 ಗಂಗೆ ಮಕ್ಕಳು

13 ಗಂಗಾಕುಲ	14 ಗಂಗಾಮತ
15 ಗಂಗಾಮತಸ್ಥ	16 ಗಂಗಾಪುತ್ರ
17 ಗೌರಿಮತ	18 ಬುಂಡೆ ಬೆಸ್ತ/ಗುಂಡೆಬೆಸ್ತ
19 ಹರಕಂತ್ರ	20 ಜಲಗಾರ
21 ಕಬ್ಬೇರ/ಕಬ್ಬೇರ್	22 ಕಬ್ಬಲಿಗ
23 ಕಬ್ಬಲಿ	24 ಕಹರ್
25 ಖಾವಿ/ಕೊಂಕಣ ಖಾರ್ವಿ	26 ಕೋಳಿ
27 ಕೋಳಿಮಹದೇವ್	28 ಮಡ್ಡರ್
29 ಮೀನಗಾರ್	30 ಮೊಗವೀರ
31 ಮೊಗೇರ್	32 ಮುಕ್ಕವಾನ್
33 ಪರಿವಾರ	34 ಸವಿಯರ್
35 ಸುಣಗಾರ	36 ತೊರೆಯ
37 ವಾಗಿ	

ಇ) ಸರ್ಕಾರಿ ಆದೇಶ ಸಂಖ್ಯೆ ಸಕಇ 225 ಬಿಸಿಎ 2000, ದಿನಾಂಕ 30 3 2002 ರಡಿಯಲ್ಲಿ ಮೊಗವೀರ ಜಾತಿ ಬಂದಿದ್ದು ಅದರ ಉಪಜಾತಿಗಳು ಯಾವುದೂ ಇರುವುದಿಲ್ಲ

ಈ) ಉಪಜಾತಿ ಇಲ್ಲದ ಪ್ರಯುಕ್ತ ಜನಸಂಖ್ಯೆವಾರು ಮಾಹಿತಿ ಲಭ್ಯವಿರುವುದಿಲ್ಲ